## ಹೊಸ ರುಚಿಯೊಂದಿಗೆ ‘ಉಪ್ಪಿ-2’

ಉಪೇಂದ್ರ ನಿರ್ದೇಶನದ ‘ಉಪ್ಪಿ–2’ ಸಿನಿಮಾ ಆಗಸ್ಟ್ 14ರಂದು ತೆರೆ ಕಾಣುತ್ತಿದೆ. ಕಳೆದ ವಾರವಷ್ಟೇ ಸೆನ್ಸಾರ್ ಮಂಡಳಿಯಿಂದ ‘ಯು/ಎ’ ಪ್ರಮಾಣಪತ್ರ ಪಡೆದಿರುವ ಪ್ರಿಯಾಂಕ ಉಪೇಂದ್ರ ನಿರ್ಮಾಣದ ಈ ಸಿನಿಮಾ, ಈಗ ತೆರೆಗೆ ಬರಲು ಚಿತ್ರಮಂದಿರಗಳ ಲೆಕ್ಕಾಚಾರದಲ್ಲಿದೆ.

‘ಸೂಪರ್’ ಚಿತ್ರದ ನಂತರ ಉಪೇಂದ್ರ ನಿರ್ದೇಶನದಲ್ಲಿ ಮೂಡಿಬಂದಿರುವ ಸಿನಿಮಾ ‘ಉಪ್ಪಿ–2’. ಕಥೆ, ಚಿತ್ರಕಥೆ, ಸಂಭಾಷಣೆ, ನಿರ್ದೇಶನದ ಜೊತೆಗೆ ನಾಯಕನಟನಾಗಿ ನಟಿಸಿರುವ ಉಪೇಂದ್ರ ಎಂದಿನಂತೆ ಈ ಚಿತ್ರದಲ್ಲೂ ‘ನಾನು–ನೀನು’ ಜಿಜ್ಞಾಸೆಯನ್ನು ನೆಚ್ಚಿಕೊಂಡಿದ್ದಾರೆ. ಪೋಸ್ಟರ್‌ಗಳಲ್ಲಿ ಕೂಡ ಉಪೇಂದ್ರ ವಿಚಿತ್ರ ಅವತಾರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಪ್ರೇಕ್ಷಕರನ್ನು ಗೊಂದಲಕ್ಕೀಡು ಮಾಡುವ ಅವರ ಹಳೆಯ ತಂತ್ರ ಹೊಸಕಾಲದ ಪ್ರೇಕ್ಷಕರಿಗೆ ಯಾವ ರೀತಿ ರುಚಿಸುತ್ತದೆ ಎನ್ನುವ ಕುತೂಹಲ ಗಾಂಧಿನಗರಕ್ಕಿದೆ. ಉಪೇಂದ್ರ ಅವರಿಗೆ ಜೋಡಿಯಾಗಿ ಕ್ರಿಸ್ಟಿನಾ ನಟಿಸಿರುವ ಈ ಚಿತ್ರದ ಸಂಗೀತ ಗುರುಕಿರಣ್ ಅವರದು. ಸಾಮಾಜಿಕ ಜಾಲತಾಣದಲ್ಲಿ ಜಗ್ಗೇಶ್ ಅವರ ಟೀಕೆ–ಟಿಪ್ಪಣಿಗಳ ಕಾರಣದಿಂದಲೂ ‘ಉಪ್ಪಿ–2’ ಸುದ್ದಿಯಲ್ಲಿದೆ. ಚಿತ್ರದ ‘ಹಲೋ ಎಕ್ಸ್‌ಕ್ಯೂಸ್ ಮಿ’ ಗೀತೆ ಕೀಳು ಅಭಿರುಚಿಯಿಂದ ಕೂಡಿದೆ ಎಂದು ಜಗ್ಗೇಶ್ ಟೀಕಿಸಿದ್ದರು. ಈ ಟೀಕೆಗೆ ಪ್ರತಿಯಾಗಿ ಉಪೇಂದ್ರ ಅಭಿಮಾನಿಗಳು ಜಗ್ಗೇಶ್ ಅವರನ್ನು ನಿಂದಿಸಿದ್ದರು. ಇದರಿಂದ ಮನನೊಂದ ಜಗ್ಗೇಶ್, ‘ಫೇಸ್‌ಬುಕ್’ನಿಂದ ಹೊರಗುಳಿದಿದ್ದಾರೆ.





## ಕನಸೊಂದು ನನಸಾಯಿತು...

ಕರಾವಳಿ ಚೆಲುವೆ ನೇಹಾ ಶೆಟ್ಟಿ ಮಳೆಯಲ್ಲಿ ನೆನೆಯಲು ತುದಿಗಾಲಲ್ಲಿ ನಿಂತಿದ್ದಾರೆ. ಇದು ಸಿನಿಮಾ ಮಳೆ. ಶಶಾಂಕ್ ನಿರ್ದೇಶನದ ‘ಮುಂಗಾರು ಮಳೆ–2’ ಸಿನಿಮಾದ ಮಳೆ. ಚಿತ್ರದ ಶೂಟಿಂಗ್ ಇನ್ನೂ ಶುರುವಾಗಿಲ್ಲವಾದರೂ, ಅದು ನಾಯಕಿ ನೇಹಾ ಅವರ ಮನಸ್ಸಿನಲ್ಲಿ ಈಗಾಗಲೇ ನಡೆಯುತ್ತಿದೆ.

ನೇಹಾ ಅವರ ಖುಷಿಗೆ ಕಾರಣ ಇಲ್ಲದಿಲ್ಲ. ಕರಾವಳಿಯ ಚೆಲುವೆಯರು ಬಾಲಿವುಡ್‌ನಲ್ಲಿ ಜನಪ್ರಿಯಗೊಂಡಿರುವುದನ್ನು ನೋಡಿದಾಗಲೆಲ್ಲ ಅವರಂತೆ ತಾನೂ ನಾಯಕಿಯಾಗಬೇಕು ಎಂದವರು ಕನಸು ಕಾಣುತ್ತಿದ್ದರು. ಆ ಕನಸಿಗೆ ಮುನ್ನುಡಿಯಂತೆ ಶಶಾಂಕ್ ಅವರ ಚಿತ್ರದಲ್ಲಿ ಅವಕಾಶ ದೊರೆತಿದೆ. ಈ ಪಾತ್ರ ಕೂಡ ಸುಲಭದಲ್ಲಿ ದೊರೆತಿಲ್ಲ. ಹತ್ತಾರು ಹುಡುಗಿಯರನ್ನು ಎಡತಾಕಿದ ನಿರ್ದೇಶಕರು ಕೊನೆಗೆ ನೇಹಾ ಅವರನ್ನು ಆಯ್ಕೆ ಮಾಡಿದ್ದಾರೆ. ಆಡಿಷನ್‌ನಲ್ಲಿ ನಿರ್ದೇಶಕರು ಹೇಳಿದಂತೆ ಹಲವು ದೃಶ್ಯಗಳಲ್ಲಿ ನೇಹಾ ಅಭಿನಯಿಸಿದ್ದಾರೆ. ಅದಾದ ಕೆಲವು ದಿನಗಳ ನಂತರ ‘ಆಯ್ಕೆಯಾಗಿದ್ದೀರಿ’ ಎನ್ನುವ ಕರೆ ಬಂದಾಗ ‘ಸ್ವರ್ಗಕ್ಕೆ ಮೂರೇ ಗೇಣು’ ಎನ್ನುವ ಪರಿಸ್ಥಿತಿ ನೇಹಾ ಅವರದು.

ಶಶಾಂಕ್ ಅವರ ಸಿನಿಮಾಗಳಲ್ಲಿ ನಾಯಕಿಯ ಪಾತ್ರ ಸಶಕ್ತವಾಗಿರುತ್ತದೆ. ಶಶಾಂಕ್ ಅವರ ಚಿತ್ರಗಳ ಮೂಲಕವೇ ರಾಧಿಕಾ ಪಂಡಿತ್ ಅವರಿಗೆ ಆರಂಭದ ದಿನಗಳಲ್ಲಿ ಗಟ್ಟಿ ಪಾತ್ರಗಳು ಸಿಕ್ಕಿದ್ದು ಎನ್ನುವ ಅರಿವೂ ನೇಹಾ ಅವರಿಗಿದೆ. ಹೀಗಾಗಿ, ತಾರಾ ವರ್ಚಸ್ಸಿನ ನಿರ್ದೇಶಕನ ಗರಡಿಯ ಮೂಲಕ ಚಿತ್ರರಂಗಕ್ಕೆ ಪರಿಚಯಗೊಳ್ಳುತ್ತಿರುವ ಪುಲಕ ಅವರದು.

‘ಮಿಸ್ ಮಂಗಳೂರು’ ಸೌಂದರ್ಯ ಕಿರೀಟ ಧರಿಸಿದ್ದ, ‘ಮಿಸ್ ಸೌತ್ ಇಂಡಿಯಾ’ ಸ್ಪರ್ಧೆಯಲ್ಲಿ ಎರಡನೆಯವರಾಗಿದ್ದ ನೇಹಾಗೆ ಕ್ಯಾಮೆರಾ ಹೊಸತಲ್ಲ. ರೂಪದರ್ಶಿಯಾಗಿ ರ್‍ಯಾಂಪ್ ತುಳಿದಿದ್ದಾರೆ. ಜಾಹೀರಾತುಗಳಲ್ಲಿ ಕಾಣಿಸಿಕೊಂಡಿದ್ದಾರೆ. ನೃತ್ಯದಲ್ಲಿ ಆಸಕ್ತಿ ಇರುವುದರಿಂದ ಸಭಾ ಕಂಪನ ಕೂಡ ಅವರಿಗಿಲ್ಲ. ಅಂದ ಹಾಗೆ, ‘ಮುಂಗಾರು ಮಳೆ–2’ರಲ್ಲಿ ನೇಹಾಗೆ ಜೋಡಿಯಾಗಿ ಮೊದಲ ಋತುವಿನ ಮಳೆ ಹುಡುಗ ಗಣೇಶ್ ನಟಿಸುತ್ತಿದ್ದಾರೆ. ರವಿಚಂದ್ರನ್, ರವಿಶಂಕರ್, ಸಾಧು ಕೋಕಿಲ ಹಾಗೂ ತಬಲಾ ನಾಣಿ ತಾರಾಗಣದಲ್ಲಿರುವ ಪ್ರಮುಖರು.

■ ರಘು